# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ

| ಭಾಗ – ೩<br>Part – III | ಬೆಂಗಳೂರು, ಶನಿವಾರ, ೧೭, ಜನವರಿ, ೨೦೨೬(ಪುಷ್ಯ, ೨೭, ಶಕವರ್ಷ, ೧೯೪೭)<br>BENGALURU, SATURDAY, 17, JANUARY, 2026(PUSHYA , 27, SHAKAVARSHA, 1947) | ನಂ. ೭೭<br>No. 77 |
|---|---|---|



**ಕರ್ನಾಟಕ ಸರ್ಕಾರ**

**ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ**

**ನಂ.204, 2ನೇ ಮಹಡಿ, 3ನೇ ಗೇಟ್,**
**ಬಹುಮಹಡಿಗಳ ಕಟ್ಟಡ,**
**ಬೆಂಗಳೂರು-560001**


---

ಸಂಖ್ಯೆ: ಕಪಂರಾಸೀನಿಆ/86/ಪ್ರಾ.ಗ.ನಿ/2023 ದಿನಾಂಕ:17-01-2026

## ಪ್ರಕಟಣೆ

**ಬೀದರ್ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನ ತಾಲ್ಲೂಕು ಪಂಚಾಯಿತಿ ಚುನಾಯಿತ ಸದಸ್ಯರ ಸಂಖ್ಯೆ ನಿಗದಿ ಹಾಗೂ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ/ಗಡಿ ನಿರ್ಣಯ ಕುರಿತು.**

ನಗರಾಭಿವೃದ್ಧಿ ಇಲಾಖೆಯು, ಬೀದರ್ ಜಿಲ್ಲೆಯ, ಬಸವಕಲ್ಯಾಣ ತಾಲ್ಲೂಕಿನ ಕೆಲವು ಗ್ರಾಮೀಣ ಪ್ರದೇಶಗಳನ್ನು ನಗರ ಸಂಸ್ಥೆಗಳನ್ನಾಗಿ ಪರಿವರ್ತಿಸಿ ಅಧಿಸೂಚನೆಯನ್ನು ಹೊರಡಿಸಿರುತ್ತದೆ. ಈ ಹಿನ್ನೆಲೆಯಲ್ಲಿ, ಈಗಾಗಲೇ ದಿನಾಂಕ:16-12-2023ರಲ್ಲಿ ಅಧಿಸೂಚಿಸಿ ಹೊರಡಿಸಿರುವ ಬಸವಕಲ್ಯಾಣ ತಾಲ್ಲೂಕಿನ, ತಾಲ್ಲೂಕು ಪಂಚಾಯಿತಿ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ವ್ಯಾಪ್ತಿಯಿಂದ ಪರಿವರ್ತನೆಗೊಂಡಿರುವ ಗ್ರಾಮೀಣ ಪ್ರದೇಶಗಳನ್ನು ಕೈಬಿಡಬೇಕಾಗಿರುತ್ತದೆ. ಆದ್ದರಿಂದ, ಸರ್ಕಾರವು, ದಿನಾಂಕ:06-01-2026ರ ಕರ್ನಾಟಕ ರಾಜ್ಯ ಪತ್ರದಲ್ಲಿ ಬಸವಕಲ್ಯಾಣ ತಾಲ್ಲೂಕಿನ ಚುನಾಯಿತ ಸದಸ್ಯರ ಸಂಖ್ಯೆ ಹಾಗೂ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ/ಗಡಿ ನಿರ್ಣಯವನ್ನು ಹಿಂಪಡೆದಿರುತ್ತದೆ. ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗವು ಬಸವಕಲ್ಯಾಣ ತಾಲ್ಲೂಕಿನ ಪರಿಷ್ಕೃತ ಸದಸ್ಯರ ಸಂಖ್ಯೆಯನ್ನು ಹಾಗೂ ಸೀಮಾ/ಗಡಿಗಳನ್ನು ನಿಯಮಾನುಸಾರ ರಚಿಸಬೇಕಾಗಿರುತ್ತದೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 121, 122 ಮತ್ತು 124 ರನ್ವಯ ಹಾಗೂ 308(ಎಫ್)ರ ಪ್ರಕರಣದಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗವು ಬೀದರ ಜಿಲ್ಲೆಯ, ಬಸವಕಲ್ಯಾಣ ತಾಲ್ಲೂಕಿನ ತಾಲ್ಲೂಕು ಪಂಚಾಯತಿ ಚುನಾಯಿತ ಸದಸ್ಯರ ಸಂಖ್ಯೆಯನ್ನು ಕೋಷ್ಟಕ **'ಅ'** ದಲ್ಲಿರುವಂತೆ ನಿಗದಿಪಡಿಸಿದೆ. **'ಅ'** ಕೋಷ್ಟಕದ 2ನೇ ಅಂಕಣದಲ್ಲಿರುವ ತಾಲ್ಲೂಕಿನಿಂದ ಆಯ್ಕೆಯಾಗುವ ತಾಲ್ಲೂಕು ಪಂಚಾಯತಿ ಚುನಾಯಿತ ಸದಸ್ಯರ ಸಂಖ್ಯೆಯನ್ನು 3ನೇ ಅಂಕಣದಲ್ಲಿ ನಿಗದಿಪಡಿಸಿದೆ.

ಬೀದರ ಜಿಲ್ಲೆಯ, ಬಸವಕಲ್ಯಾಣ ತಾಲ್ಲೂಕಿನ ತಾಲ್ಲೂಕು ಪಂಚಾಯತಿ ವ್ಯಾಪ್ತಿಯೊಳಗಿರುವ ಪ್ರದೇಶಗಳನ್ನು **22** ಏಕ ಸದಸ್ಯ ತಾಲ್ಲೂಕು ಪಂಚಾಯಿತಿ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳನ್ನಾಗಿ ವಿಂಗಡಿಸಿ ಅವುಗಳ ಸೀಮಾ/ಗಡಿಯನ್ನು ಕೋಷ್ಟಕ **'ಆ'** ದಲ್ಲಿರುವಂತೆ ನಿರ್ಣಯಿಸಿದೆ. **'ಆ'** ಕೋಷ್ಟಕದ 2 ನೇ ಅಂಕಣದಲ್ಲಿ ಪ್ರತಿಯೊಂದು

ತಾಲ್ಲೂಕು ಪಂಚಾಯತಿಯ ಪ್ರಾದೇಶಿಕ ಚುನಾವಣಾ ಕ್ಷೇತ್ರದ ಸಂಖ್ಯೆ ಹಾಗೂ ಹೆಸರನ್ನು ಮತ್ತು ಕೋಷ್ಟಕದ 3 ನೇ ಅಂಕಣದಲ್ಲಿ ನಮೂದಿಸಿರುವ ಗ್ರಾಮಗಳನ್ನೊಳಗೊಂಡ ಪ್ರದೇಶವನ್ನು ಆ ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿಯೆಂದು ನಿಗದಿಪಡಿಸಿದೆ.

ಬೀದರ ಜಿಲ್ಲೆಯ, ಬಸವಕಲ್ಯಾಣ ತಾಲ್ಲೂಕಿನ ತಾಲ್ಲೂಕು ಪಂಚಾಯತಿ ಚುನಾಯಿತ ಸದಸ್ಯರ ಸಂಖ್ಯೆ ಹಾಗೂ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ವ್ಯಾಪ್ತಿಗೆ ಸಂಬಂಧಿಸಿದಂತೆ ಆಕ್ಷೇಪಣೆಗಳಿದ್ದಲ್ಲಿ, ಪ್ರಕಟಣೆಯ ದಿನಾಂಕದಿಂದ 7 (ಏಳು) ದಿವಸಗಳ ಒಳಗಾಗಿ **ಅಂದರೆ ದಿನಾಂಕ:23-01-2026 ಸಂಜೆ 5.00 ಗಂಟೆಯ ಒಳಗೆ** ಸಲ್ಲಿಸಲು ತಿಳಿಸಿದೆ. ಆಕ್ಷೇಪಣೆಗಳನ್ನು ಆನ್‌ಲೈನ್ ಮೂಲಕ ಹಾಗೂ ಖುದ್ದಾಗಿ/ಅಂಚೆಯ ಮೂಲಕ ಈ ಕೆಳಕಂಡ ವಿಳಾಸಕ್ಕೆ ಸಲ್ಲಿಸತಕ್ಕದ್ದು. ಅಂಚೆಯ ಮೂಲಕ ಸಲ್ಲಿಸಿದಾಗಲೂ, ಆಯೋಗವು ನಮೂದಿಸಿದ ದಿನಾಂಕದೊಳಗೆ ಸಲ್ಲಿಸತಕ್ಕದ್ದು. ನಂತರ ಸ್ವೀಕೃತವಾದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಹಾಗೂ ಅಂಚೆ ಇಲಾಖೆಯ ವಿಳಂಬಕ್ಕೆ ಆಯೋಗವು ಜವಾಬ್ದಾರರಾಗಿರುವುದಿಲ್ಲ ಎಂದು ಈ ಮೂಲಕ ತಿಳಿಸಿದೆ.

**(ಅ) ಆನ್ ಲೈನ್ ಮೂಲಕ:**

**ವೆಬ್ ಸೈಟ್ ವಿಳಾಸ: "https://rdpr.karnataka.gov.in/rdc/public/"** ಸದರಿ ವೆಬ್‌ಸೈಟ್‌ನ ಮುಖಪುಟದ ಎಡಭಾಗದಲ್ಲಿರುವ ಸಾರ್ವಜನಿಕ ಸಲಹೆಗಳು ಎಂಬ ಶೀರ್ಷಿಕೆಯನ್ನು CLICK ಮಾಡಿ ತಮ್ಮ ಆಕ್ಷೇಪಣೆಗಳನ್ನು ಆನ್‌ಲೈನ್ ನಲ್ಲಿ ಸಲ್ಲಿಸಬಹುದು.

**(ಆ) ಖುದ್ದಾಗಿ/ಅಂಚೆ ಮೂಲಕ:**

ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ.
3ನೇ ಗೇಟ್, 2ನೇ ಮಹಡಿ, ಕೊಠಡಿ ಸಂಖ್ಯೆ: 222/A, ಬಹುಮಹಡಿ ಕಟ್ಟಡ,
ಅಂಬೇಡ್ಕರ್ ವೀಧಿ, ಬೆಂಗಳೂರು-560001.

**ಕೋಷ್ಟಕ 'ಅ'**

| ಬೀದರ ಜಿಲ್ಲೆ | | |
|---|---|---|
| **ಕ್ರ. ಸಂ.** | **ತಾಲ್ಲೂಕು ಪಂಚಾಯತಿಯ ಹೆಸರು** | **ತಾಲ್ಲೂಕು ಪಂಚಾಯತಿಯ ಸದಸ್ಯರ ಸಂಖ್ಯೆ** |
| 1 | 2 | 3 |
| | **ಬಸವಕಲ್ಯಾಣ** | **22** |

**ಕೋಷ್ಟಕ 'ಆ'**

| ಬೀದರ ಜಿಲ್ಲೆ | | |
|---|---|---|
| **ಕ್ರ ಸಂ** | **ತಾಲ್ಲೂಕು ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ಸಂಖ್ಯೆ ಮತ್ತು ಹೆಸರು** | **ತಾಲ್ಲೂಕು ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಗ್ರಾಮಗಳ ಹೆಸರು** |
| 1 | 2 | 3 |
| **ಬಸವಕಲ್ಯಾಣ ತಾಲ್ಲೂಕು ಪಂಚಾಯಿತಿ** | | |
| **1** | 1-ಚಂಡಕಾಪೂರ | ಚಂಡಕಾಪೂರ, ಘೋಟಾಳ, ಬಂಡಗರ ವಾಡಿ, ಬೇಡರವಾಡಿ, ಜಾಜನಮುಗಳಿ, ಮನ್ನಳ್ಳಿ. |
| **2** | 2-ಮೋರಖಂಡಿ | ಮೋರಖಂಡಿ, ಮೋರಖಂಡಿ ವಾಡಿ, ರಾಮತೀರ್ಥ (ಕೆ), ಚೌಕಿವಾಡಿ, ಉಮಾಪೂರ, ಹಳ್ಳಿ, ಲಾಹೇಶ್ವರ. |
| **3** | 3-ಪರತಾಪೂರ | ಪರತಾಪೂರ, ನೀಲಕಂಠ, ನೀಲಕಂಠ ವಾಡಿ, ಖಾನಾಪೂರ (ಕೆ), ಖಾನಾಪೂರ (ಕೆ) ವಾಡಿ, ತಳಭೋಗ,. |
| **4** | 4-ಬೇಟಬಾಲಕುಂದಾ | ಬೇಟಬಾಲಕುಂದಾ, ಖಂಡಾಳ, ಗೌರ, |
| **5** | 5-ಧನ್ನೂರಾ (ಕೆ) | ಧನ್ನೂರಾ (ಕೆ), ಧನ್ನೂರಾ (ಕೆ)ವಾಡಿ, ಜಾನಾಪೂರ, ಯದಲಾಪೂರ, ಕಿಟ್ಟಾ, ಗೋಕುಳ. |

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



| ಬೀದರ ಜಿಲ್ಲೆ | | |
|---|---|---|
| ಕ್ರ ಸಂ | ತಾಲ್ಲೂಕು ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ಸಂಖ್ಯೆ ಮತ್ತು ಹೆಸರು | ತಾಲ್ಲೂಕು ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಗ್ರಾಮಗಳ ಹೆಸರು |
| 1 | 2 | 3 |
| 6 | 6-ನಾರಾಯಣಪೂರ | ನಾರಾಯಣಪೂರ, ಖಂಡಿಕೇರಾ ವಾಡಿ, ಹುಲಗುತ್ತಿ ವಾಡಿ, ಗುಣತೀರ್ಥವಾಡಿ. |
| 7 | 7-ರಾಜೋಳಾ | ತಡೋಳಾ, ಹಂದ್ರಾಳ (ಕೆ), ಕೌಡಿಯಾಳ (ಎಸ್). ರಾಜೋಳಾ, ಘೋಗ್ಗಾ. |
| 8 | 8-ನಿರಗುಡಿ | ನಿರಗುಡಿ, ಧನಗರವಾಡಿ, ದಾಸರವಾಡಿ, ರೋಳಾ, ಕೌಡಿಯಾಳ (ಆರ್), ಶಿವಪೂರ. |
| 9 | 9-ಮಂಠಾಳ | ಮಂಠಾಳ. |
| 10 | 10-ಸಸ್ತಾಪೂರ | ಸಸ್ತಾಪೂರ, ಅತಲಾಪೂರ, ಜಾಫರವಾಡಿ, ಇಲ್ಯಾಳ, ಗುಂಡೂರ. |
| 11 | 11-ಯರಂಡಿ | ಯರಂಡಿ, ಹಣಮಂತವಾಡಿ, ಬಂದೇನವಾಜ ವಾಡಿ, ಖಾನಾಪೂರ (ಬಿ), ಹಿಪ್ಪರ್ಗಾ ಘಾಟ, ಹಿಪ್ಪರ್ಗಾ ಘಾಟ ತಾಂಡಾ, ಮಿರ್ಜಾಪೂರ. |
| 12 | 12-ಅಲಗೂಡ | ಅಲಗೂಡ, ಹಂದ್ರಾಳ (ಆರ್), ಚಿಟ್ಟಾ (ಕೆ), ಕಾಂಬಳೆವಾಡಿ, ಉರ್ಕಿ. |
| 13 | 13-ಉಜಳಂಬ | ಉಜಳಂಬ, ಧಾಮೂರಿ, ಎಕಂಬಾ, ಫುಲಧರ ವಾಡಿ, ಬೇಡರವಾಡಿ (ಯು), ಜೋಗೆವಾಡಿ, ನವಚಂದವಾಡಿ, ಹೊನ್ನಳ್ಳಿ. |
| 14 | 14-ಭೋಸ್ಗಾ | ಭೋಸ್ಗಾ, ಸಿರೂರಿ, ವಡ್ಡರಗಾ, ಯಲದಗುಂಡಿ, ಮಾನಖೇಡ್. |
| 15 | 15-ಲಾಡವಂತಿ | ಲಾಡವಂತಿ, ಗದಲೇಗಾಂವ (ಕೆ), ಭಾಕನಾಳ, ಚಿತ್ತಕೋಟಾ (ಬಿ), ಸಿರಗೂರ, ಗಿಲಿಗಿಲಿ, ಚಿತ್ತಕೋಟಾ (ಕೆ), ರಾಮತೀರ್ಥ(ಡಿ), ಹತ್ತರ್ಗಾ (ಎಸ್). |
| 16 | 16-ಕೋಹಿನೂರ | ಕೋಹಿನೂರ, ಕೋಹಿನೂರ ವಾಡಿ, ಕೋಹಿನೂರ ಪಹಾಡ, ಅಟ್ಟೂರ, ಸರಜವಳಗಾ, ಬಟಗೇರಾ, ಬಟಗೇರಾ ವಾಡಿ. |
| 17 | 17-ಹಾರಕೂಡ | ಹಾರಕೂಡ, ಹಾರಕೂಡ ತಾಂಡಾ, ಸೈದಾಪೂರ, ಗದಲೇಗಾಂವ (ಬಿ), ಸಿರಗಾಪೂರ, ಖೇರ್ಡಾ (ಕೆ). |
| 18 | 18-ಮುಡಬಿ | ಮುಡಬಿ, ಮುಡಬಿ ವಾಡಿ, ಕಿಣ್ಣಿ (ಶರಣನಗರ), ಕಿಣ್ಣಿ ವಾಡಿ, ಬಗದೂರಿ. |
| 19 | 19-ಎಕಲೂರ | ಎಕಲೂರ, ಎಕಲೂರ ವಾಡಿ, ಮೈಸಲಗಾ, ಹಾಮುನಗರ, ಜನವಾಡಾ, ಯಳವಂತಗಿ, ಹತ್ಯಾಳ. |
| 20 | 20-ಕಲಖೋರಾ | ಕಲಖೋರಾ, ಕಲಖೋರಾ ತಾಂಡಾ, ಖಾರಿಗುಂಡಾ ತಾಂಡಾ, ಹಿಪ್ಪರ್ಗಾ ಬಾಗ, ಚಿಕನಾಗಾಂವ, ಚಿಕನಾಗಾಂವ ವಾಡಿ, ರಾಮನಗರ ತಾಂಡಾ, ಪ್ರೇಮಸಿಂಗ ತಾಂಡಾ. |
| 21 | 21-ಯರಬಾಗ | ಇಸ್ಲಾಂಪೂರ, ಯರಬಾಗ, ಲಿಂಗದಳ್ಳಿ, ಸುಂಠಾಣ, ಮಂಗಳೂರ, ಹಣಮಂತವಾಡಿ (ಆರ್), ರಾಮಪೂರವಾಡಿ. |
| 22 | 22-ಖೇರ್ಡಾ (ಬಿ) | ಖೇರ್ಡಾ (ಬಿ), ಶಿವರಾಮ ತಾಂಡಾ, ಮಾಶ್ಯಾಳ ತಾಂಡಾ, ಹಿರನಾಗಾಂವ, ಧನ್ನೂರಾ (ಆರ್), ಸದಲಾಪೂರ, ಪಂಡರಗೇರಾ, ಪಂಡರಗೇರಾ ತಾಂಡಾ. |

**ವಿಶೇಷ ಸೂಚನೆ:-**

**ಬೀದರ್ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನ ತಾಲ್ಲೂಕು ಪಂಚಾಯಿತಿ ಕ್ಷೇತ್ರಗಳ ಚುನಾಯಿತ ಸದಸ್ಯರ ಸಂಖ್ಯೆ ಮತ್ತು ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ/ಗಡಿ ನಿರ್ಣಯ ಕುರಿತಂತೆ, ದಿನಾಂಕ:23-01-2026ರ ಒಳಗಾಗಿ ಸಲ್ಲಿಸಲ್ಪಟ್ಟ ಆಕ್ಷೇಪಣೆ/ಅಹವಾಲುಗಳ ಪರಿಶೀಲನಾ ಅದಾಲತ್ ಅನ್ನು ದಿನಾಂಕ:27-01-2026 ರಂದು ಬೆಳಿಗ್ಗೆ10:30 ರಿಂದ ಮಧ್ಯಾಹ್ನ 1:30 ರವರೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಗೇಟ್-ನಂ-2, 2ನೇ ಮಹಡಿ, ಕೊಠಡಿ ಸಂಖ್ಯೆ:229, 230 ಬಹುಮಹಡಿಗಳ ಕಟ್ಟಡ, ಬೆಂಗಳೂರು-560001 ಇಲ್ಲಿ ನಡೆಸಲಾಗುವುದು. ಆಕ್ಷೇಪಣೆ ಮತು ಅಹವಾಲುಗಳನ್ನು ಸಲ್ಲಿಸಿರುವವರು ಅದಾಲತ್ ನಲ್ಲಿ ಭಾಗವಹಿಸಲು ಇಚ್ಛಿಸಿದಲ್ಲಿ, ಸರ್ಕಾರದಿಂದ ನೀಡಿರುವ ಭಾವಚಿತ್ರವುಳ್ಳ ಗುರುತಿನ ಚೀಟಿಯ ಮೂಲ ಪ್ರತಿಯನ್ನು ತಮ್ಮೊಂದಿಗೆ ಕಡ್ಡಾಯವಾಗಿ ತರತಕ್ಕದ್ದು.**

**(ಡಾ||ಎನ್. ನೋಮೇಶ್ ಕುಮಾರ್)**
ನಿರ್ದೇಶಕರು (ಪಂ. ರಾಜ್) ಮತ್ತು
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಹಾಗೂ ಸದಸ್ಯ ಕಾರ್ಯದರ್ಶಿ
ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH